**ದಿನಾಂಕ 05/01/2019 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರು ರವರ ಆದೇ**
**ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಮಿತಿಯ ಅದ್ಯಕ್ಷರಿಂದ ಮಾನ್ಯ ಶ್ರೀಮತಿ.ಜಯಲಕ್ಷ್ಮಮ್ಮಪಿಳ್ಳಪ್ಪ**
**ಅದ್ಯಕ್ಷತೆಯಲ್ಲಿ ಬೆಳಿಗ್ಗೆ 11.00 ಪ್ರಾರಂಭಿಸಲಾಯಿತು.**

ಹಾಜರಿದ್ದ ಪಾಲಿಕೆ ಸಮಿತಿ ಸದಸ್ಯರು

- ಶ್ರೀಮತಿ.ಜಯಲಕ್ಷ್ಮಮ್ಮಪಿಳ್ಳಪ್ಪ,_ಅಧ್ಯಕ್ಷರು
- ಶ್ರೀ.ಶ್ರೀನಿವಾಸ್ ಸದಸ್ಯರು
- ಶ್ರೀಮತಿ.ಮಹಾಲಕ್ಷ್ಮಿ, ಸದಸ್ಯರು
- ಶ್ರೀ.ಮುನಿರೆಡ್ಡಿ, ಸದಸ್ಯರು
- ಶ್ರೀ.ಆರ್.ಮಂಜುನಾಥ್, ಸದಸ್ಯರು
- ಶ್ರೀ.ಜಗದೀಶ್

ಹಾಜರಿದ್ದ ಅಧಿಕಾರಿ /ನೌಕರರು

ಶ್ರೀ.ರಾಜಶೇಖರ್, ಉಪ ಆಯುಕ್ತರು(ಯಲಹಂಕ ವಲಯ)
ಶ್ರೀಮತಿ.ಆರ್.ವಿಜಯಲಕ್ಷ್ಮಿ ಸ.ಕ.ಅ
ಶ್ರೀ.ವಿ. ರಘು, AEE SWM
ಶ್ರೀ.ನಾರಾಯಣ ಸ್ವಾಮಿ, ಮೌಲ್ಯಮಾಪಕರು
ಶ್ರೀಮತಿ.ಶ್ವೇತ, ಸಹಾಯಕ ಅಭಿಯಂತರರು, ವಾ-10
ಶ್ರೀ.ಪ್ರಭಾಕರ್, ಅರೋಗ್ಯ ಪರಿವೀಕ್ಷಕರು
ಶ್ರೀ.ಅಣ್ಣಪ್ಪ, ಕಂ.ವ
ಶ್ರೀ.ಸತ್ಯನಾರಾಯಣ,ಕಂ.ವ
ಶ್ರೀ.ಶಿವಕುಮಾರ್, ದ್ವಿ.ದ.ಸ

ಸ.ಕಂ.ಅ (ವಿ.ಪು) :- ಹಿಂದಿನ ಮಾಸಿಕ ಸಭೆಯ ನಡವಳಿಕೆಯನ್ನು ಓದಿ ಎಂದು ಹೇಳಿದರು. ಅದಕ್ಕೆ ಉತ್ತರವಾಗಿ ಕಂದಾಯ ವಸೂಲಿಗಾರರು ಪೂರ್ಣ ನಡವಳಿಕೆಯನ್ನು ಓದಿದರು.

ಶ್ರೀಮತಿ.ಜಯಲಕ್ಷ್ಮಮ್ಮ ಪಿಳ್ಳಪ್ಪ, ಅಧ್ಯಕ್ಷರು :- ರಾಮಚಂದ್ರಪುರ ಸರ್ಕಾರಿ ಶಾಲೆಯ ಪಕ್ಕ ಇರುವ ಆರೋಗ್ಯ ಕೇಂದ್ರಕ್ಕೆ ಖಾತೆ ... ಖಾತಾ ತಯಾರಿಸಿ ಖಾತಾ ನಕಲನ್ನು ನೀಡಿರುತ್ತಾರೆ. ಇಲ್ಲವಾದರೆ ಖಾತೆ ತಯಾರಿಸುವ ಕ್ರಮ ವಹಿಸಿ ಎಂದು ಹೇಳಿದರು.

ಕ್ರಮ:- ಸಹ ಕಂದಾಯ ಅಧಿಕಾರಿ, ವಿದ

ಶ್ರೀಮತಿ.ಜಯಲಕ್ಷ್ಮಮ್ಮ ಪಿಳ್ಳಪ್ಪ, ಅಧ್ಯಕ್ಷರು ಮತ್ತು ಸದಸ್ಯರು:- ಸಾರ್ವಜನಿಕರು ಓಡಾಡುವ ಸ್ಥಳದಲ್ಲಿ, ಜನರು ಕಸವನ್ನು 8ನೇ ಕ್ರಾಸ್ ಗೋಪಾಲಪ್ಪ ಗಾರ್ಡನ್ ಹತ್ತಿರ ಕಸ ಹಾಕಿರುತ್ತಾರೆ. ಮಜಾ ತಿಂಡಿ ಹೋಟೆಲ್ ಪಕ್ಕ ಕಸ ಇರುತ್ತದೆ ಹೋಗುವಾಗ ಪಾರ್ಕ್‌ನಲ್ಲಿ ಕಸ ಇರುತ್ತದೆ. ಅದನ್ನು ತೆಗೆಯಲು ಕ್ರಮ ಕೈಗೊಳ್ಳಬೇಕು.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು (

ಶ್ರೀ.ಸುರೇಶ್ ಸದಸ್ಯರು :- ಕಸ ಸೆಗ್ರಿಗೇಟ್ ಮಾಡಿ ಕೊಟ್ಟರೆ, ಕಸ ತೆಗೆದುಕೊಂಡು ಹೋಗುತ್ತೇವೆ. ನಾನು ಸ್ವಚ್ಛತೆ ಕೈಗೊಳ್ಳುತ್ತೇನೆ..

ಶ್ರೀಮತಿ.ಜಯಲಕ್ಷ್ಮಮ್ಮ ಪಿಳ್ಳಪ್ಪ, ಅಧ್ಯಕ್ಷರು :- ಕಂಡ ಕಂಡಲ್ಲಿ ಕಸ/ತ್ಯಾಜ್ಯ ಎಸೆಯುವ ಸಾರ್ವಜನಿಕರನ್ನು ತಡೆಯಲು " ... ಗಳನ್ನು ಇಲ್ಲಿಯ ವರೆಗೆ ನೇಮಕ ಮಾಡಿರುವುದಿಲ್ಲ ಏಕೆ? ಎಂದರು ಮತ್ತು ವಾರ್ಡ್‌ನಲ್ಲಿ ರಸ್ತೆಯಲ್ಲಿ ಗುಡಿಸುವ ... ತೆಗೆಯಲು ಮೂರು ಟ್ರಾಕ್ಟರ್ ಅವಶ್ಯಕತೆಯಿದ್ದು ಮತ್ತು ಫೆಬ್ರವರಿಯಿಂದ ಮೇ ವರೆಗೂ ಹೆಚ್ಚುವರಿಯಾಗಿ ಒ

ಬೇಕಾಗುತ್ತದೆ. (ಆ ನಾಲ್ಕು ತಿಂಗಳಿನಲ್ಲಿ ಹೆಚ್ಚಾಗಿ ಎಲೆ ಮತ್ತು ಹೂ ಗಳು ಜಾಸ್ತಿ ಉದುರುವುದರಿಂದ) ವಾರ್ಡ್ ಕಮಿಟಿಯ ಸದಸ್ಯರು ಒತ್ತಾಯಿಸಿರುತ್ತಾರೆ.

**ಕ್ರಮ:**- ಸಹಾಯಕ ಕಾರ್ಯಪಾಲಕ ಅಭಿಯಂತರರು (SWM

**ಶ್ರೀಮತಿ.ಜಯಲಕ್ಷ್ಮಮ್ಮ ಪಿಳ್ಳಪ್ಪ, ಅಧ್ಯಕ್ಷರು ಮತ್ತು ಸದಸ್ಯರು:-** ಯಾವ ರಸ್ತೆಗೂ ಸರಿಯಾಗಿ ಸ್ಟ್ರೀಟ್ ಲೈಟ್ ಆನ್ ಆಗಿರು ಅದರಲ್ಲಿಯೂ ಜನರು ವಾಕಿಂಗ್ ಮಾಡುವ ವಾರ್ಡ್ ಕಛೇರಿ Park Road Light on ಇರುವುದಿಲ್ಲ. Hook System ಬದಲಾಗಿ Timer ನ್ನು ಅಳವಡಿಸಬೇಕು.

**ಕ್ರಮ:**- ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್

**ಶ್ರೀಮತಿ.ಜಯಲಕ್ಷ್ಮಮ್ಮ ಪಿಳ್ಳಪ್ಪ, ಅಧ್ಯಕ್ಷರು :-** ಇಡೀ ವಾರ್ಡ್‌ಗೆ ಬೀದಿ ದೀಪ ನಿರ್ವಾಹಕರು ಒಬ್ಬರೇ ಇದ್ದಾರೆ, ಇಬ್ಬರನ್ನು ನೇಮಿ ಹಾಗೂ ಇನ್ನುಮುಂದೆ ಪ್ರತಿದಿನ ಬೆಳಗ್ಗೆ 6.15ಕ್ಕೆ ಬೀದಿ ದೀಪ ಹಾರಿಸಿ, ಸಂಜೆ 5-45ಕ್ಕೆ Light on ಮಾಡಬೇಕು ಎಂದು ಶ್ರೀ.ಬಾಬುರೆಡ್ಡಿ ರವರಿಗೆ ಸೂಚಿಸಿದರು. ಈ ವಿಚಾರವಾಗಿ ಇಲ್ಲಿಯ ವರೆಗೂ ಕ್ರಮ ತೆಗೆದುಕೊಂಡಿಲ್ಲ ಏಕೆ. ಮುಂದಿನ ಸಭೆಗೆ ಗುತ್ತಿಗೆದಾರರು ಹಾಜರು ಇರತಕ್ಕದ್ದು.

**ಕ್ರಮ:**- ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್

**ಸ.ಕಂ.ಅ (ವಿ.ಪು)** :- ಶ್ರೀಮತಿ.ಲೇ.ಪೆದ್ದಕ್ಕ ರವರ ಸೇವಾ ಪುಸ್ತಕದ ವಿವರ ನೀಡಲು ಪತ್ರದ ಮೂಲಕ AEE ರವರಿಗೆ ಸಲ್ಲಿಸಿರುತ್ತೇನೆ. (ಲಗತ್ತಿಸಿದೆ)

**ಶ್ರೀಮತಿ.ಜಯಲಕ್ಷ್ಮಮ್ಮ ಪಿಳ್ಳಪ್ಪ, ಅಧ್ಯಕ್ಷರು ಮತ್ತು ಸದಸ್ಯರು:-** ಫುಟ್ ಪಾತ್ ಮೇಲೆ ಕಲ್ಲುಗಳು ಇರುತ್ತದೆ. Sign Board ಗಳೆಲ್ಲಾ ಬಿದ್ದು ಹೋಗಿರುತ್ತದೆ, ಅದನ್ನು ಸರಿ ಮಾಡಿ ನಿಲ್ಲಿಸಿರುವುದಿಲ್ಲ, ಗುಂಡಿಗಳು ಸರಿ ಮಾಡಿರುವುದಿಲ್ಲ, ನಂಜಪ್ಪ ಸರ್ಕಲ್ ಚಾಮುಂಡಿ ಲೇಔಟ್‌ವರೆಗೆ ಪೈಪ್‌ಗಳು ಬ್ಲಾಕ್ ಆಗಿರುತ್ತದೆ, ಅದನ್ನು ಸರಿ ಮಾಡಿ ಮತ್ತು ಮೋರಿಯಲ್ಲಿ ಕಸ ತುಂಬಿರುವುದನ್ನು ತೆಗೆದು ಹಾಕಬೇಕು. ಈ ಸಂಬಂಧ ಜಾರುರು ಕ್ರಮ ವಹಿಸುವುದು.

**ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು** (BWSSB

**ಶ್ರೀಮತಿ.ಶ್ವೇತ, (AE):-** Sign Boardಗಳು ಸರಿ ಪಡಿಸುತ್ತೇನೆ. ಸೋಮವಾರ ಟ್ರಾಕ್ಟರ್ ಬರುತ್ತದೆ, ಎಲ್ಲಾ ಕಸ ಮಾಡಿ ಮುಗಿಸುತ್ತೇನೆ.

**ಎಲ್ಲಾ ಸದಸ್ಯರು:-** ವಾರಕ್ಕೆ ಮೂರು ಬಾರಿ ನೀರು ಬರಬೇಕು. ಈಗ 3 ದಿನಕ್ಕೆ ಒಂದು ಬಾರಿ ನೀರು ಬರುತ್ತದೆ. ಅದನ್ನು 2 ದಿನಕ್ಕೆ ಒಂದು ಬಾರಿ ನೀರು ಬರುವ ಹಾಗೆ ಮಾಡಿಕೊಡಿ ಎಂದರು.

**ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು** (BWSSB

**ಶ್ರೀ.ನಾರಾಯಣಸ್ವಾಮಿ(ಬಿ.ಡಬ್ಯ.ಎಸ್.ಎಸ್.ಬಿ)** :- **Estimate Sanction** ಆಗಿದೆ, ಇನ್ನು ಕೆಲಸ ಪ್ರಾರಂಭಿಸುತ್ತೇವೆ. ಯಶವಂತಪುರ ಸ್ಥಳಗಳಲ್ಲಿ ವಾರಕ್ಕೆ 3 ಬಾರಿ ನೀರು ಬಿಡುತ್ತಾರೆ. ಇಲ್ಲಿ ಬರಲು ನಾನು ಮೇಲಾಧಿಕಾರಿಗಳ ಗಮನಕ್ಕೆ ತರುತ್ತೇನೆ ಎಂದರು.

**ಶ್ರೀ.ಕಾಮಯ್ಯ (ವಿ.ಪು)** :- Last week Bio Matric System Server down ಆಗಿದ್ದು, 2 ದಿನ Salary P.K ಗಳಗೆ ಸಿಗಲಿಲ್ಲ. ಇತ್ತೀಚ್ಚೆಗೆ ಕ್ಯಾಂಟೀನ್‌ಯಿಂದ ಬರುವ ಊಟ ಸರಿಯಿಲ್ಲ ಎಂದು P.Kಗಳು ದೂರು ಮಾಡುತ್ತಿರುತ್ತಾರೆ. ಸರಿ ಪಡಿಸಿ ಎಂದರು.

**ಕ್ರಮ**:- ಹಿರಿಯ ಆರೋಗ್ಯ ಪಾಲಕರು (ಬ್ಯಾಟರಾಯನಪುರ)

**ಶ್ರೀ.ಮಹಾಲಕ್ಷ್ಮೀ ಸದಸ್ಯರು** :- ದೊಡ್ಡಬೊಮ್ಮಸಂದ್ರ ಕೆರೆ ಹತ್ತಿರ **Walking** ಮಾಡುವವರಿಗೆ 2 ರಿಂದ 3 ಸಾರ್ವಜನಿಕರ ಶೌಚಾಲಯವನ್ನು ನಿರ್ಮಿಸಿ ಅನುಕೂಲವಾಗುತ್ತದೆ ಎಂದು ಹೇಳದರು. ಕೆರೆ ಉಸ್ತುವಾರಿ ವಿಭಾಗ ಮಾತನಾಡಿ ಸ್ಥಾಪಿಸಲು ವ್ಯವಸ್ಥೆ ಮಾಡಿ ಎಂದರು.

**ಎಲ್ಲಾ ಸದಸ್ಯರು**:- ದೊಡ್ಡಬೊಮ್ಮಸಂದ್ರ ಗ್ರಾಮದಲ್ಲಿ (ವಾರ್ಡ್ ನಂ–10) ರಲ್ಲಿ ಬಿ.ಬಿ.ಎಂ.ಪಿ ಕಮಿಷನರ್ ಆದೇಶದಂತೆ, ಸರ್ಕಾರ ಆಸ್ತಿಗಳಿದ್ದು, ಅದರ ಹಾಜು ಬಾಜು ಸಂಘ ಸಂಸ್ಥೆಗಳನ್ನು ನಿರ್ಮಾಣ ಮಾಡಿಕೊಂಡು ಅನಧಿಕೃತ ಕಟ್ಟಡವನ್ನು (**Chicken Shop, Mutton Shop**) ವಿನಾಯಕ ಸಂಘ ಇದನ್ನು ವಾಣಿಜ್ಯ ಚಟುವಟಿಕೆ ನಡೆಸುತ್ತಿದ್ದಾರೆ, ಪತ್ತೆ ಮಾಡಿ ಬಿ.ಬಿ.ಎಂ.ಪಿ ವಶಕ್ಕೆ ಪಡೆಯ ಬೇಕೆಂದು ಎಲ್ಲಾ ಸದಸ್ಯರು ಸೂಚಿಸಿದರು. ಅವುಗಳನ್ನು ಪರಿಶೀಲಿಸಿ, ದಾಖಲೆಗಳನ್ನು ತೆಗೆದುಕೊಂಡು ಬಿ.ಬಿ.ಎಂ.ಪಿ ವಶಕ್ಕೆ ಪಡೆದು ಖಾತಾ ತಯಾರಿಸುವ ಕ್ರಮ ವಹಿಸುವುದು.

ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಂದಾಯ ಅಧಿಕಾರಿ (ವಿದ್ಯಾರಣ್ಯಪುರ)
ಹಾಗೂ ಕಾರ್ಯದರ್ಶಿಗಳು ವಾರ್ಡ್–10
ಸಹಾಯಕ ಕಂದಾಯ ಅಧಿಕಾರಿ
ವಿದ್ಯಾರಣ್ಯಪುರ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು,
ವಾರ್ಡ್ ಕಮಿಟಿ–10 ಹಾಗೂ ಪಾಲಿಕೆ ಸದಸ್ಯರು
Jayalakshmamma Pillappa
Corporator
Ward - 10, Doddabommasandra
B.B.M.P

ಪ್ರತಿಯನ್ನು:

- ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ, ಕೇಂದ್ರ ಕಛೇರಿ ರವರ ಅವಗಾಹನೆಗಾಗಿ ಮಂಡಿಸಿದೆ.
- ಅಪರ ಆಯುಕ್ತರು(ಯಲಹಂಕ) ರವರ ಅವಗಾಹನೆಗಾಗಿ ಮಂಡಿಸಿದೆ.
- ಉಪ ಆಯುಕ್ತರು(ಯಲಹಂಕ) ರವರ ಅವಗಾಹನೆಗಾಗಿ ಮಂಡಿಸಿದೆ.
- ಕಂದಾಯ ಅಧಿಕಾರಿಗಳು(ಯಲಹಂಕ) ರವರ ಅವಗಾಹನೆಗಾಗಿ ಮಂಡಿಸಿದೆ.
- ಕಛೇರಿ ಕಡತಕ್ಕೆ.